









ಸುಮಾರು ನಲುವತ್ತು ವರ್ಷಗಳಿಂದ ಇಲ್ಲಿಯೇ ಜೀವನವನ್ನು ಮಾಡುತ್ತಿರುವ ಗಿರಿ ಭಟ್ಟರ ಜೀವನ ಪ್ರಾರಂಭಿಕ ದಿನಗಳಲ್ಲಿ ಬಹಳಷ್ಟು ಸವಾಲುಗಳನ್ನು ಎದುರಿಸಿದ್ದು ನಿಜ. ಕಾಡು ಪ್ರಾಣಿಗಳೊಂದಿಗೆ ನಿರಂತರ ಸಂಘರ್ಷವನ್ನು  ಎದುರಿಸಿದ ದಿನಗಳನ್ನು ಈಗಲೂ ನೆನಪಿಸಿಕೊಳ್ಳುತ್ತಾ ನಗುತ್ತಾರೆ.

'ಬೆಟ್ಟದ ಮೇಲಿನ ಬದುಕು ಅಭ್ಯಾಸವಾಗಿದೆ. ಸಾವಿರಾರು ಮಂದಿ ಚಾರಣಿಗರಿಗೆ ಮಳೆಗಾಲವನ್ನು ಹೊರತುಪಡಿಸಿ ಉಳಿದೆಲ್ಲಾ ದಿನಗಳಲ್ಲಿ ಅನ್ನದ ವ್ಯವಸ್ಥೆ ಮಾಡುವ ಅವಕಾಶ ಸಿಕ್ಕಿರುವುದು ನಿಜಕ್ಕೂ ನನ್ನ ಪುಣ್ಯ' ಎನ್ನುತ್ತಾರೆ ಭಟ್ರು.

ಕರ್ನಾಟಕದಲ್ಲೇ ಅತ್ಯಂತ ಎತ್ತರದ ಕುಮಾರ ಪರ್ವತದ ಚಾರಣಕ್ಕೆ ಪ್ರತಿನಿತ್ಯ ದೂರ ದೂರದ ಜಿಲ್ಲೆ ಮತ್ತು ರಾಜ್ಯಗಳಿಂದ ಚಾರಣಿಗರು ಬರುತ್ತಾರೆ. ಎಷ್ಟೋ ಸಲ ಈ ತಂಡದಲ್ಲಿ ವಿದೇಶೀಯರೂ ಇರುತ್ತಾರೆ. ಎಲ್ಲರಿಗೂ ಇಲ್ಲಿ ವಾಸವಿರುವ ಭಟ್ರು ಸಿಗುತ್ತಾರೆ. ಚಾರಣಿಗರಿಗೆ ಬೇಕಾಗುವ ಚಾರಣದ ಮಾರ್ಗದರ್ಶನ ಹಾಗೂ ಮುನ್ನೆಚ್ಚರಿಕೆಯ ಕ್ರಮಗಳ ಮಾಹಿತಿಗೂ ಇವರು ನೆರವಾಗುತ್ತಾರೆ.

ಕಾಡಿನ ಮಧ್ಯೆ ಏಕಾಂಗಿಯಾಗಿ ಬದುಕುತ್ತಿರುವ ಮಹಾಲಿಂಗೇಶ್ವರ ಭಟ್ಟರಿಗೆ ಸಂಸಾರ ಇಲ್ಲ ಎಂದಲ್ಲ. ಇವರ ಹೆಂಡತಿ ಮತ್ತು ಮಕ್ಕಳು ಬೆಟ್ಟದ ಕೆಳಗೆ ಊರಲ್ಲಿ ವಾಸಿಸುತ್ತಿದ್ದಾರೆ ಅಷ್ಟೇ. ಆಗಾಗ್ಗೆ ಇವರನ್ನು ನೋಡಿಕೊಂಡು ಬರುತ್ತಾರೆ ಭಟ್ರು. ಆಳುಗಳ ಸಹಾಯದಿಂದ ಗಿರಿ ಭಟ್ಟರು ತಮ್ಮ ತೋಟದ ಕೆಲಸಗಳನ್ನು ನಿಭಾಯಿಸುತ್ತಾರೆ.

ಅಂದ ಹಾಗೆ ಇವರ ಮನೆಯ ಊಟೋಪಚಾರ ಸ್ವಸಹಾಯ ಪದ್ಧತಿಯದು. ಬಂದವರು ತಮ್ಮ ತಟ್ಟೆಗಳನ್ನು ತೊಳೆದುಕೊಂಡು ಊಟ ಮಾಡಿ, ಮತ್ತೆ ತೊಳೆದು ಇಟ್ಟು ಹೋಗಬೇಕು. ಅಡುಗೆ ಮಾಡಿ ಊಟ ಬಡಿಸುವುದಷ್ಟೇ ಭಟ್ಟರ ಜವಾಬ್ದಾರಿ.